**ಓ ಎಸ್ 145/2023 ಡಿಡಬ್ಲ್ಯೂ.2**

**ಸಾಕ್ಷಿಯನ್ನು ದಿಃ 06.04.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ ಡಿ ಟಿ ವಕೀಲರಿಂದಃ**

ನ್ಯಾಯಾಲಯಕ್ಕೆ ನಾನು ಯಾವ ಉದ್ದೇಶಕ್ಕೆ ಬಂದಿದ್ದೇನೆ ಎಂದು ತಿಳಿದುಕೊಂಡಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯ ಸಂಗತಿಗಳನ್ನು ನಾನೇ ಹೇಳಿ ಬರೆಸಿದ್ದೇನೆ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಎಲ್ಲಾ ವ್ಯವಹಾರಗಳು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದವರು ಮಾತ್ರ ನನಗೆ ಗೊತ್ತು. ವಾದಿಯು ಎಷ್ಟು ಸ್ವತ್ತುಗಳ ಮೇಲೆ ದಾವೆ ಹೂಡಿದ್ದರು ಎಂದು ನನಗೆ ಗೊತ್ತಿಲ್ಲ.

ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ವಿವಾದ ಏರ್ಪಟ್ಟಿರುವ ಬಗ್ಗೆ ನನಗೆ ಗೊತ್ತಿದೆ. ಸದರಿ ವಿಭಾಗದಲ್ಲಿ ಯಾವ್ಯಾವ ಸ್ವತ್ತುಗಳು ಒಳಗೊಂಡಿವೆ ಆ ಸ್ವತ್ತುಗಳು ಯಾರ್ಯಾರಿಗೆ ಎಷ್ಟೆಷ್ಟು ಹೋಗಿವೆ ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಸಾಕ್ಷಿಯು ಮುಂದುವರೆದು ಅದನ್ನು ಪ್ರಮಾಣಪತ್ರಿಕೆಯಲ್ಲಿ ಬರೆಸಿರುವುದಾಗಿ ಹೇಳಿರುತ್ತಾರೆ. ಪ್ರಮಾಣಪತ್ರಿಕೆಯಲ್ಲಿ ಬರೆಸಿರುವುದನ್ನು ನ್ಯಾಯಾಲಯ ದಲ್ಲಿ ಹೇಳಲು ಏನು ತೊಂದರೆ ಇಲ್ಲ. ವಿಭಾಗದಲ್ಲಿ ಯಾವ್ಯಾವ ಸ್ವತ್ತುಗಳು ಯಾರ್ಯಾರಿಗೆ ಎಷ್ಟೆಷ್ಟು ಹೋಗಿವೆ ಎಂದು ಈಗ ನನಗೆ ನೆನಪಿಲ್ಲ. ನನ್ನ ಮುಖ್ಯವಿಚಾರಣಾ ಪ್ರಮಾಣಪತ್ರಿಕೆಯನ್ನು ತಯಾರಿಸಲು ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ. ವಾದಿ ಮತ್ತು ಪ್ರತಿವಾದಿಗಳು 1991 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ. ವಾದಿ ಮತ್ತು ಪ್ರತಿವಾದಿಗಳ ನಡುವೆ ಹಲವಾರು ಸರ್ವೆ ನಂಬರ್ ಗಳ ಜಮೀನು ವಿಭಾಗ ಆಗಿರುವ ಕಾರಣ ಎಲ್ಲಾ ಸರ್ವೆ ನಂಬರ್ ಗಳು ನನಗೆ ನೆನಪಿನಲ್ಲಿ ಇಲ್ಲ. ವಾದಿ ಮತ್ತು ಪ್ರತಿವಾದಿಗಳು ಎಷ್ಟು ಸರ್ವೆ ನಂಬರ್ ಆಸ್ತಿಗಳನ್ನು ಹಂಚಿಕೊಂಡಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಹಾಗೇ ಹಂಚಿಕೊಂಡಿರುವ ಜಮೀನುಗಳ ಪೈಕಿ ಸರ್ವೆನಂಬರ್ 9 ಮತ್ತು ಸರ್ವೆ ನಂಬರ್ 26 ಮಾತ್ರ ನನಗೆ ನೆನಪಿದೆ. ಉಳಿದವು ನನಗೆ ನೆನಪಿಲ್ಲ. ಸರ್ವೆನಂಬರ್ 9 ರಲ್ಲಿ ಯಾರಿಗೂ ಸಹ ಭಾಗ ಅಗಿದೆ. ಸರ್ವೆನಂಬರ್ 26 ರಲ್ಲಿ 4 ಜನರಿಗೆ ಭಾಗ ಆಗಿದೆ.

ಸರ್ವೆನಂಬರ್ 26 ರಲ್ಲಿ 1 ಎಕರೆ 0.09 ಗುಂಟೆ ಜಮೀನು ಇದೆ. ತಿಮ್ಮೇಗೌಡರಿಗೆ 0.13 ಗುಂಟೆ ಜಮೀನು ಹೋಗಿದೆ ಉಳಿದವರಿಗೆ ತಲಾ 0.12 ಗುಂಟೆ ಜಮೀನು ಹೋಗಿದೆ. 1991 ರಲ್ಲಿ 4 ಜನರು ಭಾಗ ಮಾಡಿಕೊಂಡರು ಅವರುಗಳೆಂದರೆ ತಿಮ್ಮೇಗೌಡ, ಸಣ್ಣೆಗೌಡ, ಗೋವಿಂದೆಗೌಡ ಹಾಗೂ ವೆಂಕಟೇಶ್. ಇವರೆಲ್ಲರೂ ಪಟೇಲ್ ತಿರುಮಲೇ ಗೌಡರ ಮಕ್ಕಳು. ತಿರುಮಲೆಗೌಡರಿಗೆ ಇವರು 4 ಜನ ಮತ್ತು ಒಂದು ಹೆಣ್ಣು ಮಗಳು ಮಕ್ಕಳು. ಸದರಿ ವಿಭಾಗವು ಯಾವುದೇ ದಾಖಲೆ ರೂಪದಲ್ಲಿ ಆಗಿಲ್ಲ. ದಾಖಲೆ ಮಾಡಿಕೊಳ್ಳಲು ಏನಾದರೋ ತೊಂದರೆ ಇತ್ತೋ ಇಲ್ಲೋ ನನಗೆ ಗೊತ್ತಿಲ್ಲ. ವಿಭಾಗದ ಸಮಯದಲ್ಲಿ  ವಾದಿ ಮತ್ತು ಪ್ರತಿವಾದಿಗಳು ಹಾಗೂ ನಾವು ಇದ್ದೇವು. ವಿಭಾಗಕ್ಕೆ ಒಳಗಾದ ಆಸ್ತಿಗಳ ದಾಖಲಾತಿಗಳನ್ನು ನಾವು ಅಂದು ನೋಡಲಿಲ್ಲ. ಈಗಲೂ ಸಹ ಆ ದಾಖಲೆಗಳನ್ನು ನಾನು ನೋಡಲಿಲ್ಲ. ಪ್ರಸ್ತುತ ಆ ದಾಖಲೆಗಳ ಪ್ರಕಾರ ಯಾರ್ಯಾರಿಗೆ ಎಷ್ಟೆಷ್ಟು ಆಸ್ತಿಗಳು ನಮೂದು ಆಗಿದೆ ಎಂದು ನನಗೆ ಗೊತ್ತಿಲ್ಲ. ಯಾವ್ಯಾವ ಸರ್ವೆನಂಬರ್ ಜಮೀನುಗಳಲ್ಲಿ ಯಾರ್ಯಾರು ಅನುಭವದಲ್ಲಿ ಇದ್ದಾರೆಂದು ಹೇಳಲು ಆಗುವುದಿಲ್ಲ. ಪ್ರಸ್ತುತ ದಾವಾ ಆಸ್ತಿಗಳ ಕಂದಾಯ ದಾಖಲೆಗಳು ವಾದಿ ಮತ್ತು ಪ್ರತಿವಾದಿಗಳ ಜಂಟಿ ಹೆಸರಿನಲ್ಲಿ ದಾಖಲಾಗಿವೆ ಎಂದರೆ ಸರಿ. ತಿರುಮಲೇಗೌಡರು ಪೌತಿಯಾದ ನಂತರ ಪೌತಿ ಖಾತೆ ಮೂಲಕ ಜಂಟಿಯಾಗಿ ನಮೂದು ಆಗಿದೆ ಅಂದರೆ ಸರಿ. ಜಂಟಿಯಾಗಿ ನಮೂದು ಆಗಿರುವ ಸಂಗತಿಯನ್ನು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರಿಕೆಯಲ್ಲಿ ಹೇಳಿ ಬರೆಸಿದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳ ಪೈಕಿ ಯಾವ ಸರ್ವೆ ನಂಬರ್ ಆಸ್ತಿಯನ್ನು ವಾದಿಯು ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದು ಹೇಳಲು ಆಗುವುದಿಲ್ಲ. ಮಗಳ ಮದುವೆಗಾಗಿ 0.20 ಗುಂಟೆ ಜಮೀನನ್ನು ಮಾರಾಟ ಮಾಡುವುದಾಗಿ ವಾದಿ ಹೇಳಿದ್ದರು. ಮಾರಾಟ ಮಾಡುವ ಬಗ್ಗೆ ಆನ್ ಡಿಮ್ಯಾಂಡ್ ಪ್ರನೋಟ್ ತರಹದ ದಾಖಲೆ ಬರೆದುಕೊಟ್ಟಿದ್ದರು. ಹಾಗೇ ತಿಮ್ಮೇಗೌಡರು ಸಣ್ಣೇಗೌಡರಿಗೆ ಬರೆದುಕೊಟ್ಟಿದ್ದರು. ಆ ಪತ್ರವನ್ನು ಪಾಂಡವಪುರದಲ್ಲಿ ಬರೆದುಕೊಟ್ಟಿದ್ದರು ಅದಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ. ಆನ್ ಡಿಮ್ಯಾಂಡ್ ಪ್ರನೋಟ್ ತರಹದ ದಾಖಲೆ ಬರೆದುಕೊಟ್ಟ ವಿಷಯವನ್ನು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರಿಕೆಯಲ್ಲಿ ಹೇಳಿಲ್ಲ. ಪಾಂಡವಪುರದಲ್ಲಿ ಎಲ್ಲಿ

ಬರೆದುಕೊಟ್ಟರು ನನಗೇ ಗೊತ್ತಿಲ್ಲ.

ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**